**ಜಗಜ್ಜನನಿ ಶ್ರೀ ಶಾರದಾಮಾತೆ**
ಸಂಕಲನ : ಸ್ವಾಮಿ ರಾಘವೇಶಾನಂದ
ಪ್ರಕಾಶಕರು : ರಾಮಕೃಷ್ಣ ಮಠ,
ಸ್ವಾಮಿ ವಿವೇಕಾನಂದ ರಸ್ತೆ, ಅಲಸೂರು,
ಬೆಂಗಳೂರು – 560 008 ಬೆಲೆ: ರೂ. 90/-

ಶ್ರೀಮಾತೆ ಶಾರದಾದೇವಿಯವರ ೧೫೦ನೆ ಜನ್ಮದಿನವನ್ನು ಆಚರಿಸಿ, ಅವರ ಸಂದೇಶವನ್ನು ಜನತೆಗೆ ತಲುಪಿಸಲು ಶ್ರೀರಾಮಕೃಷ್ಣ ಆಶ್ರಮದ ವಿವಿಧ ಶಾಖೆಗಳು ಅನೇಕ ಕಾರ್ಯಕ್ರಮಗಳನ್ನು ನಡೆಸಿವೆ. ಈ ಸಂದರ್ಭದಲ್ಲಿ ಬೆಂಗಳೂರಿನ ಅಲಸೂರಿನಲ್ಲಿರುವ ರಾಮಕೃಷ್ಣ ಮಠವು ಹೊರತಂದ ಎರಡು ಹೊತ್ತಗೆಗಳಲ್ಲಿ "ಜಗಜ್ಜನನಿ ಶ್ರೀಶಾರದಾಮಾತೆ" ಅತ್ಯಂತ ಆಕರ್ಷಕವಾಗಿದೆ.

ಆರ್ಟ್‌ಪೇಪರಿನಲ್ಲಿ ಪೂರ್ಣ ವರ್ಣದಲ್ಲಿ ಅಚ್ಚಾಗಿರುವ ಈ ಪುಸ್ತಕದಲ್ಲಿ ಶ್ರೀಮಾತೆಯವರ ಹದಿನೇಳು ಚಿತ್ರಗಳಿವೆ. ಶ್ರೀರಾಮಕೃಷ್ಣ, ವಿವೇಕಾನಂದರ ನಾಲ್ಕು ಚಿತ್ರಗಳೂ ಇವೆ. ಎರಡು ಪುಟಗಳಷ್ಟು ಅಗಲದ ಮನಮೋಹಕ ಪ್ರಕೃತಿ ಚಿತ್ರಗಳೊಡನೆ ಮಿಳಿತವಾಗಿರುವಂತೆ ಇವನ್ನು ಅಚ್ಚುಮಾಡಲಾಗಿದೆ. ವರ್ಣಚಿತ್ರದ ಅರ್ಧಭಾಗವನ್ನು ಮಸುಕಾದ ಹಿನ್ನೆಲೆಯನ್ನಾಗಿಸಿ ಬರಹಗಳನ್ನು ಮುದ್ರಿಸಿದೆ. ಹೀಗೆ ಬರಹಕ್ಕೆ ಆಕರ್ಷಕ ವಾತಾವರಣ ಸಿಕ್ಕು, ಭಾವೋದ್ದೀಪನವಾಗುತ್ತದೆ. ಪ್ರಕೃತಿಚಿತ್ರಗಳ ಆಯ್ಕೆ, ಮುದ್ರಣ ವಿಧಾನ, ಅಚ್ಚುಕಟ್ಟು ವಿದೇಶೀ ಪುಸ್ತಕಗಳನ್ನು ನೆನಪಿಸುತ್ತವೆ. ಬೆಲೆ ಮಾತ್ರ ಜೇಬಿಗೆ ಭಾರವಾಗದೆ ಇದೆ.

ಮೊದಲ ಮೂರು ಲೇಖನಗಳು ಶ್ರೀಮಾತೆಯವರ ವ್ಯಕ್ತಿತ್ವದ ಪರಿಚಯ ಮಾಡಿಕೊಡುತ್ತವೆ. ಬುದ್ಧ, ಕನ್‌ಫ್ಯೂಷಿಯಸ್, ಏಸುಕ್ರಿಸ್ತ ಮತ್ತು ಶ್ರೀರಾಮಕೃಷ್ಣರ ವಿಚಾರಗಳ ಹಿನ್ನೆಲೆಯಲ್ಲಿ ಶ್ರೀಮಾತೆಯವರ ಕೊನೆಯ ಸಂದೇಶದ ವಿಶ್ಲೇಷಣೆಯನ್ನು ಸ್ವಾಮಿ ಹರ್ಷಾನಂದಜಿ ಸೊಗಸಾಗಿ ಮಾಡಿದ್ದಾರೆ. ಪರರ ದೋಷಗಳನ್ನು ಕಾಣದೆ ಎಲ್ಲರೂ ನಮ್ಮವರೇ ಎಂಬ ಭಾವವನ್ನು ಅಳವಡಿಸಿಕೊಳ್ಳುವುದೇ ಶಾಂತಿಯ ಮಾರ್ಗ ಎನ್ನುವ ಶ್ರೀಮಾತೆಯವರ ಮಾತು ಎಷ್ಟು ಸತ್ಯ! ಇಂತಹ ಸರಳ ವ್ಯಕ್ತಿತ್ವದ ಹಿಂದೆ ಕಠಿನ ತಪಸ್ಸೂ ಇದೆ ಎನ್ನುವುದನ್ನು ಸ್ವಾಮಿ ಪುರುಷೋತ್ತಮಾನಂದಜಿಯವರ ಸ್ಫೂರ್ತಿಯುತ ಲೇಖನ ಎತ್ತಿ ತೋರಿಸುತ್ತದೆ. ತಪಸ್ಸಿನ ಆವಶ್ಯಕತೆಯ ಬಗ್ಗೆ ಸ್ಪಷ್ಟ ತಿಳುವಳಿಕೆ ಮೂಡಿಸುತ್ತದೆ. ಶ್ರೀಮಾತೆಯವರು ಆಧ್ಯಾತ್ಮಿಕ ಮೇರುವ್ಯಕ್ತಿ ಎನ್ನುತ್ತಾ ಸಾಮಾನ್ಯರು ತಮಗೂ ಶ್ರೀಮಾತೆಯವರಿಗೂ ಅಂತರವನ್ನು ಸೃಷ್ಟಿಸಿಕೊಳ್ಳದೆ ತಮ್ಮ ಹೃದಯದಲ್ಲಿ ಸ್ವಂತ ತಾಯಿ ಎಂದೇ ಅವರನ್ನು ಸ್ವೀಕರಿಸಿ ಕರೆಯುತ್ತಿರುವ ಸೋಜಿಗದ ಜೀವನ ಪರಿಚಯವನ್ನು ಸ್ವಾಮಿ ರಾಘವೇಶಾನಂದಜಿ ಮಾಡಿಕೊಡುತ್ತಾರೆ.

ಶ್ರೀಮಾತೆಯವರ ಸ್ವ-ಸವಿನೆನಪುಗಳನ್ನು ಒಗ್ಗೂಡಿಸಿ ಮೊದಲಬಾರಿಗೆ ಕನ್ನಡದಲ್ಲಿ ಕೊಟ್ಟಿರುವ ಪ್ರಯತ್ನ ಸ್ತುತ್ಯರ್ಹ. ಗಹನವಾದ ವಿಷಯಗಳನ್ನು ಸರಳ ಸಾಮಾನ್ಯ ಭಾಷೆಯಲ್ಲಿ ಮನಸ್ಸಿನ ಆಳಕ್ಕೆ ಅರಿವಾಗದಂತೆ ಇಳಿಸುವುದು ಶ್ರೀಮಾತೆಯವರ ಮಾತಿನ ರೀತಿ. ಪ್ರೀತಿ, ಭರವಸೆ, ಸಾಂತ್ವನ ನೀಡುವ ಈ ಮಾತುಗಳು ಭಯಸಂತಾಪಗಳನ್ನು ನೀಗಿ ನೆಮ್ಮದಿ ತರುತ್ತವೆ. ಆಧ್ಯಾತ್ಮಿಕ ಗುರುಗಳು ಮರೆತು ದೂರವಿಟ್ಟಿದ್ದ ಗೃಹಸ್ಥ ಜನರನ್ನು ಮಕ್ಕಳಂತೆ ಕಂಡು ಸಮಾಧಾನ ನೀಡಿ ನಲಿದಾಡಿದ ಪುಣ್ಯ ಶ್ರೀಮಾತೆಯವರದು. ಅಸಂಖ್ಯ ಮಂದಿಗೆ ಆತ್ಮೀಯರಾಗಿ, ಆನಂದ, ಆತ್ಮವಿಶ್ವಾಸಗಳನ್ನು ತುಂಬಿ ಮುನ್ನಡೆಸಿದ ಮಹಿಮಾವಂತರು.

ನೂರೈವತ್ತು ಸೂಕ್ತಿಗಳ ವಚನವಿನ್ಯಾಸ, ಮಾತಿನ ಕಾಂತಿ ಮನಸ್ಸನ್ನು ಆಕರ್ಷಿಸುತ್ತದೆ. ಸರಳತೆ, ಬಿಚ್ಚುಮನಸ್ಸು, ಸ್ನೇಹಪರತೆ, ಕಷ್ಟಜೀವಿಗಳಲ್ಲಿ ಕನಿಕರ, ಮೊರೆಹೊಕ್ಕು ಬಂದವರನ್ನು ಕಾಪಾಡುವ ಆರ್ತತ್ರಾಣತೆ ಈ ವಚನಗಳ ಹಿನ್ನೆಲೆ. ಶ್ರೀಮಾತೆಯವರ ಕರುಣೆ ಎಂಬ ವಿಭಾಗದಡಿಯಲ್ಲೇ ಹದಿನೈದು ಸೂಕ್ತಿಗಳನ್ನು ಸಂಗ್ರಹಿಸಿದ್ದಾರೆ. ಸಾಧನೆಯ ಮಾರ್ಗ ತೋರುವಲ್ಲಿನ ಖಚಿತತೆ, ಶಿಷ್ಯರ ಮೇಲಿನ ಕೃಪೆ, ಸೌಹಾರ್ದ ನಿಕಟ ಸಂಬಂಧ ಈ ಸಾಲುಗಳಲ್ಲಿ ಕಾಣಬರುತ್ತವೆ, ಶ್ರೀಮಾತೆಯವರ ಜೀವನೋನ್ನತಿಯ ದರ್ಶನವಾಗುತ್ತದೆ.

ಕೆಲವು ಪುಟ್ಟ ಕೊರತೆಗಳೂ ಇವೆ. ಮುದ್ರಣ ದೋಷಗಳನ್ನು ನಿವಾರಿಸಬಹುದಿತ್ತು. ಶ್ರೀಶಾರದಾದೇವಿಯವರು ಧ್ಯಾನಸ್ಥರಾಗಿದ್ದ ಬೆಂಗಳೂರು ಆಶ್ರಮದ ಹಿಂದಿನ ಕಲ್ಲುಗುಡ್ಡದ ಜಾಗದ ಚಿತ್ರಗಳು ಇಲ್ಲಿಲ್ಲ. ಕೊಟ್ಟಿರುವ ಚಿತ್ರಗಳ ಚಾರಿತ್ರಿಕ ಹಿನ್ನೆಲೆ, ಸಂದರ್ಭಗಳನ್ನು ತಿಳಿಸಬಹುದಿತ್ತು. ಆದರೆ ಗುಣವು ಅತಿಶಯವಾದಾಗ ರೂಪದ ಲೋಪವು ಲೆಕ್ಕಕ್ಕಿಲ್ಲದೆ ಹೋಗುತ್ತದೆ ಎಂಬ ಸೂಕ್ತಿಯಂತೆ ರಾಮಕೃಷ್ಣ ವಿವೇಕಾನಂದ ಸಾಹಿತ್ಯದಲ್ಲಿ ಈ ಪುಸ್ತಕ ತನ್ನ ಸೊಗಸಿನಿಂದ ಎದ್ದು ತೋರುತ್ತದೆ. ವಾಕ್-ದೃಶ್ಯ ಅನುಭವದ ಮೂಲಕ ಸಂತೋಷವನ್ನುಂಟುಮಾಡುವ ಓದಿ ಮುಗಿದ ಮೇಲೆ, ಎಲ್ಲಿ ಆ ದಿವ್ಯಕ್ಷಣಗಳು! ಎನ್ನುವಂತಹ ನವುರಾದ ಕಾವ್ಯಾನುಭವವನ್ನು ನೀಡುವ ಒಂದು ಅಪೂರ್ವ ಕೃತಿ ಇದು.

—ಡಾ || ಎಚ್. ಪಾಂಡುರಂಗವಿಠಲ
ಕನ್ನಡ ಪ್ರಾಧ್ಯಾಪಕರು,
ಸದ್ವಿದ್ಯಾ ಪಾಠಶಾಲೆ, ಮೈಸೂರು